

# ನಾವು ಮನುಷ್ಯರಲ್ಲ

ಮಹೇಶ್ವರ ಹುರುಕಡ್ಲಿ
ಕಲೆ: ಸಂತೋಷ್ ಸಸಿಹಿತ್ಲು

ಒಂದಾನೊಂದು ಕಾಲದಲ್ಲಿ ಹೂವಳ್ಳಿ ಎಂಬ ರಾಜ್ಯದಲ್ಲಿ ಸಿಂಗರಸ ಎಂಬ ರಾಜನಿದ್ದ. ಅವನಿಗೆ ಮಲ್ಲಿಗೆ ಎಂಬ ಮಗಳಿದ್ದಳು. ರಾಜನ ಅತ್ಯಂತ ಪ್ರೀತಿಯ ಮಗಳಾದ ಮಲ್ಲಿಗೆಗೆ ಹೂವುಗಳೆಂದರೆ ಪಂಚಪ್ರಾಣ. ಅದಕ್ಕೆಂದೇ ರಾಜ ಅರಮನೆಯ ಅಂಗಳದಲ್ಲಿ ನೂರಾರು ಬಗೆಯ ಹೂಗಿಡಗಳನ್ನು ಬೇರೆ ಬೇರೆ ರಾಜ್ಯಗಳಿಂದ ತರಿಸಿ ಬೆಳೆಸಿದ್ದನು. ಒಮ್ಮೆ ಯುವರಾಣಿ ಮಲ್ಲಿಗೆ ಮುಂಜಾನೆಯ ಸಮಯದಲ್ಲಿ ಎದ್ದು ಹೂಗಳನ್ನು ನೋಡಲು ಹೂದೋಟಕ್ಕೆ ಬಂದಳು. ಸೂರ್ಯನ ಎಳೆಯ ರಶ್ಮಿಗೆ ಆಗತಾನೆ ಕರಗುತ್ತಿದ್ದ ಇಬ್ಬನಿಯ ಹನಿಗಳನ್ನು ಪಕಳೆಗಳಿಂದ ನೆಲಕ್ಕೆ ಜಾರಿಸಿ ಮೆಲ್ಲಮೆಲ್ಲಗೆ ಅರಳುತ್ತಿದ್ದ ಕೆಂಗುಲಾಬಿಯನ್ನು ಯುವರಾಣಿ ಕಂಡು ಬೆರಗಾಗುತ್ತಿದ್ದಳು. ಅಷ್ಟರಲ್ಲೇ ಎಲ್ಲಿಂದಲೋ ಗುಯ್ ಎನ್ನುತ್ತಾ ಹಾರಿಬಂದ ಜೇನುಹುಳುವೊಂದು ಆ ಗುಲಾಬಿ ಹೂವಿನ ಮೇಲೆ ಕೂತು ಮಕರಂದ ಹೀರಲು ಮುಂದಾಯಿತು. ಯುವರಾಣಿಗೆ ಈ ದೃಶ್ಯ ಕಠಿಣವಾಗಿ ತೋರಿ 'ಏಯ್ ಜೇನ್ನೊಣವೇ ನಿಲ್ಲು, ನಾನು ನೆಟ್ಟು ಬೆಳೆಸಿದ ಈ ಕೆಂಗುಲಾಬಿಗೆ ನನ್ನ ಅನುಮತಿ ಇಲ್ಲದೇ ನುಗ್ಗುವೆಯಾ? ಏಳು ಹೊರಡು ಇಲ್ಲಿಂದ' ಎಂದು ಅಬ್ಬರಿಸಿದಳು.

ಜೇನುಹುಳು 'ಅಮ್ಮಾ ಯುವರಾಣಿ ಈ ಹೂವು ನಿಸರ್ಗದ ಸ್ವತ್ತೇ ವಿನಃ ಹುಲುಮಾನವರಾದ ನಿಮ್ಮದಲ್ಲ, ಆ ನಿಸರ್ಗದೇವತೆಯೇ ನಮಗೆ ಹೂಗಳ ಮಕರಂದ ಹೀರಲು ಅನುಮತಿ ಕೊಟ್ಟಿರುವಾಗ ನೀನೇಕೆ ಅಡ್ಡಿಪಡಿಸುವೆ?' ಎಂದಿತು. ಜೇನುಹುಳುವಿನ ಮಾತು ಕೇಳಿ ಕೋಪಗೊಂಡ ಯುವರಾಣಿ 'ಎಲಾ ನಿನ್ನಾ ನನ್ನನ್ನೇ ಹುಲುಮಾನವ ಅಂತೀಯಾ? ನಾನು ಈ ರಾಜ್ಯದ ಯುವರಾಣಿ. ನನ್ನ ಅರಮನೆಯ ತೋಟಕ್ಕೆ ಬಂದು ನಾ ಬೆಳೆಸಿದ ಹೂವಿನ ಮೇಲೆ ಕೂತು ನನಗೇ ಉಪದೇಶ ನೀಡುವೆಯಾ?' ಎಂದು ಅಬ್ಬರಿಸುತ್ತಾ ಪಕ್ಕದಲ್ಲಿದ್ದ ಸಣ್ಣ ಕಟ್ಟಿಗೆಯನ್ನು ಅದರ ಮೇಲೆ ಬೀಸಿದಳು. ಯುವರಾಣಿಯ ಹೊಡೆತವನ್ನು ತಪ್ಪಿಸಿಕೊಂಡ ಜೇನುಹುಳು ಪ್ರತಿದಾಳಿ ನಡೆಸಲು ಅವಳ ಮೂಗಿನ ಮೇಲೆ ಕೂತು ಕುಟುಕಿ ಹಾರಿಹೋಯಿತು. ಚಿಟ್ಟನೆ ಚೀರಿದ ಯುವರಾಣಿ 'ಅಯ್ಯೋ ಅಮ್ಮಾ ಉರಿ ಉರಿ!' ಎನ್ನುತ್ತಾ ಅರಮನೆಯೊಳಗೆ ಓಡಿದಳು.

ಪ್ರಕರಣದ ಪೂರ್ವಾಪರ ತಿಳಿದ ರಾಜ ಕೋಪದಿಂದ ಕುದಿಯತೊಡಗಿದ ಹಾಗೂ ತನ್ನ ಇಡೀ ರಾಜ್ಯದಲ್ಲಿರುವ ಎಲ್ಲ ಜೇನುಗೂಡುಗಳಿಗೆ ಬೆಂಕಿ ಇಡುವಂತೆ ಆಜ್ಞೆ ಹೊರಡಿಸಿದ. ಒಂದೆರಡು ತಿಂಗಳಲ್ಲಿ ಇಡೀ ರಾಜ್ಯದ ಯಾವ ಮರದಲ್ಲೂ ಮೂಲೆಯಲ್ಲೂ ಜೇನುಗೂಡುಗಳು ಇರದಂತೆ ಸುಟ್ಟುಹಾಕಲಾಯಿತು. ಇದಾದ ಮರುವರ್ಷ ರಾಜನ ಖಜಾನೆ ಖಾಲಿಯಾಗಿತ್ತು. ಯಾವೊಬ್ಬ ರೈತನೂ ಸಹ ತೆರಿಗೆ ನೀಡದ್ದರಿಂದ ಖಜಾನೆಯಲ್ಲಿ ಹಣವಿರಲಿಲ್ಲ. ರಾಜ ರೈತರನ್ನು ಕೇಳಿದಾಗ ರೈತನೊಬ್ಬ 'ಮಹಾರಾಜ ಈ ವರ್ಷ ನಮ್ಮೆಲ್ಲರ ಹೊಲದಲ್ಲಿ ಬೆಳೆ ಕೈಗೇ ಬಂದಿಲ್ಲ. ಮನೆಯಲ್ಲಿ ಊಟ ಮಾಡಲೂ ದವಸವಿಲ್ಲ ಇನ್ನು ತೆರಿಗೆ ಹೇಗೆ ಕಟ್ಟಬೇಕು?' ಎಂದರು. 'ಈ ವರ್ಷ ಹೊಲಕ್ಕೆ ಬೆಳೆ ಇಟ್ಟಾದ ಮೇಲೆ ಬೆಳೆ ಚೆನ್ನಾಗಿಯೇ ಇತ್ತು ಆದರೆ ಗಿಡದ ಎಲ್ಲೂ ಒಂದೇ ಒಂದು ಕಾಳು ಮೂಡಿಲ್ಲ ಮಹಾರಾಜ' ಎಂದು ಮಗದೊಬ್ಬ ರೈತನು ಹೇಳಿದನು. ಸಭೆ ಮುಗಿದ ಮೇಲೆ ರಾಜನು